PRAJAVANI - 10.08.2020

# ಬಿಜಿಎಸ್‌ಇ ಪ್ರಾಪರ್ಟೀಸ್ ಆ್ಯಂಡ್ ಸೆಕ್ಯುರಿಟೀಸ್ ಲಿಮಿಟೆಡ್


(ಹಿಂದಿನ ಹೆಸರು: ಬೆಂಗಳೂರು ಸ್ಟಾಕ್ ಎಕ್ಸ್‌ಚೇಂಜ್ ಲಿಮಿಟೆಡ್)

**(CIN: U70102KA1937PLC001292)**

ಸ್ಟಾಕ್ ಎಕ್ಸ್‌ಚೇಂಜ್ ಟವರ್ಸ್, 51, 1ನೇ ಕ್ರಾಸ್, ಜೆ.ಸಿ. ರಸ್ತೆ, ಬೆಂಗಳೂರು – 560027

ಫೋನ್: 080–41575566 / 5545

ಇಮೇಲ್: ed_secretary@bgse.co.in; Website: www.bgse.co.in


## 57ನೆಯ ಎಜಿಎಂ ಸೂಚನೆ

**ಎಜಿಎಂ ಸೂಚನೆ:** ಬಿಜಿಎಸ್‌ಇ ಪ್ರಾಪರ್ಟೀಸ್ ಆ್ಯಂಡ್ ಸೆಕ್ಯುರಿಟೀಸ್ ಲಿಮಿಟೆಡ್ (ಕಂಪನಿ), ತನ್ನ 57ನೆಯ ವಾರ್ಷಿಕ ಸರ್ವಸದಸ್ಯರ ಸಭೆಯನ್ನು (AGM) ಶುಕ್ರವಾರ, 2020ರ ಸೆಪ್ಟೆಂಬರ್ 04 ರಂದು ಬೆಳಿಗ್ಗೆ 10.15ಕ್ಕೆ ಸದಸ್ಯರ ಭೌತಿಕ ಉಪಸ್ಥಿತಿ ಇಲ್ಲದಂತೆ, ಒಂದು ಸಾಮಾನ್ಯ ಸ್ಥಳದಲ್ಲಿ, ಕಂಪನಿಗಳ ಅಧಿನಿಯಮ, 2013ನ್ನು ಕಾರ್ಪೊರೇಟ್ ಸಚಿವಾಲಯವು (MCA) ಹೊರಡಿಸಿರುವ ಸಂ. 20/2020, 14/2020, 17/2020 ಸುತ್ತೋಲೆಗಳ ಜೊತೆ ಓದಿಕೊಂಡ ಪ್ರಕಾರ ವಿಡಿಯೊ ಕಾನ್ಫರೆನ್ಸ್ (VC) ಅಥವಾ ಇತರೆ ಶ್ರವಣ–ದೃಶ್ಯ ಮಾಧ್ಯಮಗಳ (OAVM) ಮೂಲಕ ನಡೆಸಲು ಉದ್ದೇಶಿಸಿದೆ ಎಂದು ಈ ಮೂಲಕ ಕಂಪನಿಯ ಸದಸ್ಯರೆಲ್ಲರಿಗೂ ಸೂಚನೆಯನ್ನು ನೀಡಲಾಗುತ್ತಿದೆ.

**ದಾಖಲೆಗಳ ಲಭ್ಯತೆ:** ಯಾರೆಲ್ಲ ಸದಸ್ಯರು ತಮ್ಮ ಇಮೇಲ್ ವಿಳಾಸಗಳನ್ನು ಡಿಪಾಸಿಟರಿ ಪಾರ್ಟಿಸಿಪೆಂಟರು (DPs) ಮತ್ತು ಕಂಪನಿಯೊಂದಿಗೆ/ರಿಜಿಸ್ಟ್ರಾರ್ ಮತ್ತು ಟ್ರಾನ್ಸ್ಫರ್ ಏಜೆಂಟರೊಂದಿಗೆ (RTA) ನೋಂದಾಯಿಸಿಕೊಂಡಿದ್ದಾರೋ ಅಂತಹ ಸದಸ್ಯರೆಲ್ಲರಿಗೂ ಕಂಪನಿಯ 57ನೆಯ ಎಜಿಎಂ ಸೂಚನೆಯ ಮತ್ತು 2019–20ರ ಸಾಲಿನ ವಾರ್ಷಿಕ ವರದಿಯ ಪ್ರತಿಗಳನ್ನು ಕಳುಹಿಸಲಾಗಿದೆ. ಜೊತೆಗೆ, ಈ ದಾಖಲೆಗಳು ಕಂಪನಿಯ ವೆಬ್‌ಸೈಟ್ www.bgse.co.in ನಲ್ಲೂ ಲಭ್ಯವಿರುವಂತೆ ವ್ಯವಸ್ಥೆ ಮಾಡಲಾಗಿದೆ.

**ಇ–ಮತದಾನ:** ಸಿಡಿಎಸ್‌ಎಲ್ ರಿಮೋಟ್ ಇ–ಮತದಾನದ ಸೌಲಭ್ಯವನ್ನು ಒದಗಿಸುತ್ತಿದೆ ಮತ್ತು ಇ–ಮತದಾನವು ಮಂಗಳವಾರ, 2020 ಸೆಪ್ಟೆಂಬರ್ 01 ರಂದು ಬೆಳಿಗ್ಗೆ 09.00ಕ್ಕೆ ಆರಂಭವಾಗಿ ಗುರುವಾರ, 2020 ಸೆಪ್ಟೆಂಬರ್ 03ರಂದು ಸಂಜೆ 05.00ಕ್ಕೆ ಕೊನೆಯಾಗುತ್ತದೆ. ಈ ಅವಧಿಯಲ್ಲಿ, ಕೊನೆಯ ದಿನಾಂಕವಾದ ಶುಕ್ರವಾರ, 2020 ಆಗಸ್ಟ್ 28ರಂದು ಕಂಪನಿಯ ಶೇರುಗಳನ್ನು ಭೌತಿಕ ರೂಪದಲ್ಲೋ ಅಥವಾ ಡೀಮ್ಯಾಟ್ ರೂಪದಲ್ಲೋ ಹೊಂದಿರುವ ಶೇರುದಾರರು ತಮ್ಮ ಮತಗಳನ್ನು ಇಲೆಕ್ಟ್ರಾನಿಕ್ ವಿಧಾನದಲ್ಲಿ ಚಲಾಯಿಸಬಹುದು.

ಯಾವ ಸದಸ್ಯರು ಡೀಮ್ಯಾಟ್ ಅಥವಾ ಭೌತಿಕ ರೂಪದಲ್ಲಿ ತಮ್ಮ ಶೇರುಗಳನ್ನು ಹೊದಿರುವರೋ, ಅಥವಾ ಯಾರು ತಮ್ಮ ಇಮೇಲ್ ವಿಳಾಸಗಳನ್ನು ಕಂಪನಿಯೊಂದಿಗೆ ನೋಂದಾಯಿಸಿಕೊಂಡಿಲ್ಲವೋ, ಅಂತಹ ಸದಸ್ಯರು ಸಭೆಯು ನಡೆಯುವ ಅವಧಿಯಲ್ಲಿ ರಿಮೋಟ್ ಇ–ಮತದಾನ ಅಥವಾ ಇ–ಮತದಾನದ ಮೂಲಕ ತಮ್ಮ ಮತಗಳನ್ನು ಚಲಾಯಿಸಬಹುದು. ಭೌತಿಕ ರೂಪದಲ್ಲಿ ಶೇರು(ಗಳನ್ನು) ಹೊಂದಿರುವ ಸದಸ್ಯರು ಕಂಪನಿಯ ed_secretary@bgse.co.in ಇಮೇಲ್ ಐಡಿಗೆ ಬರೆದು ತಮ್ಮಲ್ಲಿರುವ ಶೇರುಗಳ ಬಗ್ಗೆ ಅಗತ್ಯವಾದ ವಿವರಗಳನ್ನು ಮತ್ತು ದಾಖಲೆಗಳನ್ನು ನೀಡಿ ತಮ್ಮ ಇಮೇಲ್ ಐಡಿಗಳನ್ನು ಕಂಪನಿಯೊಂದಿಗೆ ನೋಂದಾಯಿಸಿಕೊಳ್ಳಬಹುದು; ಇಲೆಕ್ಟ್ರಾನಿಕ್ ರೂಪದಲ್ಲಿ ಶೇರು(ಗಳನ್ನು) ಹೊಂದಿರುವ ಸದಸ್ಯರು ಕಂಪನಿಯಿಂದ ಎಲ್ಲ ಸಂವಹನಗಳನ್ನು ವಿದ್ಯುನ್ಮಾನ ರೂಪದಲ್ಲಿ ಸ್ವೀಕರಿಸಲು ತಮಗೆ ಸಂಬಂಧಪಟ್ಟ ಡಿಪಾಸಿಟರಿ ಪಾರ್ಟಿಸಿಪೆಂಟರೊಂದಿಗೆ (DPs) ತಮ್ಮ ಇಮೇಲ್ ವಿಳಾಸಗಳನ್ನು ದಾಖಲಿಸಿಕೊಳ್ಳಬೇಕಾಗಿ ಅಥವಾ ನವೀಕರಿಸಬೇಕಾಗಿ ಕೋರುತ್ತೇವೆ.

ಯಾವ ಸದಸ್ಯರಿಗೆ VC ಮೂಲಕ ಸಭೆಯನ್ನು ಪ್ರವೇಶಿಸಲು ಮತ್ತು ಅದರಲ್ಲಿ ಭಾಗವಹಿಸಲು ತಾಂತ್ರಿಕ ನೆರವಿನ ಅಗತ್ಯವಿರುವುದೋ ಅಂತಹವರು ಇ–ಮತದಾನ ಸೇವೆಯನ್ನು ಒದಗಿಸುತ್ತಿರುವ ಸೆಂಟ್ರಲ್ ಡಿಪಾಸಿಟರಿ ಸರ್ವೀಸಸ್ (ಇಂಡಿಯಾ) ಲಿಮಿಟೆಡ್ (ಸಿಡಿಎಸ್‌ಎಲ್) ಅನ್ನು ಸಂಪರ್ಕಿಸಬಹುದು; ಸಂಪರ್ಕ ವ್ಯಕ್ತಿಗಳು: ಶ್ರೀ ನಿತಿನ್ ಕುಂದರ್ (022–23058738); ಶ್ರೀ ಮೆಹಬೂಬ್ ಲಖಾನಿ (022–23058543); ಶ್ರೀ ರಾಕೇಶ್ ದಲ್ವಿ (022–23058542) ಇಮೇಲ್ ಐಡಿ: helpdesk.evoting@cdslindia.com

**ಡಿವಿಡೆಂಡನ್ನು ದಾಖಲಿಸುವ ದಿನಾಂಕ ಮತ್ತು ಪುಸ್ತಕ ಮುಚ್ಚುವ ದಿನಾಂಕ:** ಅಂತಿಮ ಡಿವಿಡೆಂಡ್‌ಗೆ ಅರ್ಹರಾಗಿರಲು ಮಂಡಲಿಯು ಶುಕ್ರವಾರ, 2020 ಆಗಸ್ಟ್ 28 ದಿನಾಂಕವನ್ನು ಡಿವಿಡೆಂಡನ್ನು ದಾಖಲಿಸುವ ದಿನಾಂಕ ಎಂದು ನಿಗದಿಪಡಿಸಿದೆ. ಎಜಿಎಂ ಸಲುವಾಗಿ, ಸದಸ್ಯರ ರಿಜಿಸ್ಟರ್ ಮತ್ತು ಶೇರು ವರ್ಗಾವಣೆ ಪುಸ್ತಕಗಳನ್ನು ಶನಿವಾರ, 2020 ಆಗಸ್ಟ್ 29ರಿಂದ ಶನಿವಾರ, 2020 ಸೆಪ್ಟೆಂಬರ್ 04ರವರೆಗೆ (ಎರಡು ದಿನಗಳೂ ಸೇರಿವೆ) ಮುಚ್ಚಲಾಗಿರುತ್ತದೆ.

**ಡಿವಿಡೆಂಡ್ ಮೇಲಿನ ಟಿಡಿಎಸ್:** ಎಜಿಎಂ ಸೂಚನೆಯ ಟಿಪ್ಪಣಿ ಕ್ರ. ಸಂ. 13ರಲ್ಲಿ ವಿವರವಾಗಿ ಹೇಳಿರುವಂತೆ ಡಿವಿಡೆಂಡ್ ಮೇಲೆ ಟಿಡಿಎಸ್ ಅನ್ನು ಮುರಿದುಕೊಳ್ಳಲಾಗುವುದು.

ನಿರ್ದೇಶಕರ ಮಂಡಲಿಯ ಆದೇಶದ ಮೇರೆಗೆ

ಸಹಿ/– (ವಿನೋದ್ ಜ ಜೈನ್)

ಕಾರ್ಯನಿರ್ವಾಹಕ ನಿರ್ದೇಶಕರು, DIN: 00248275

ಸ್ಥಳ: ಬೆಂಗಳೂರು

ದಿನಾಂಕ: 10.08.2020